**ಸಾಕ್ಷಿಗೆ ದಿನಾಂಕ 13.11.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ S.L.G ವಕೀಲರಿಂದ**

ಜಮೀನನ್ನು ಖರೀದಿಸುವ ಪೂರ್ವದಲ್ಲಿ ನಾನು ಸೋಮಶೆಟ್ಟಿರವರ ಮಕ್ಕಳಿಗೆ ಸದರಿ ವಿಚಾರವನ್ನು ತಿಳಿಸಿರುತ್ತೇನೆ. ಜಮೀನನ್ನು ಖರೀದಿಸುವಾಗ ದಿನ ಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ಮಾಡಿಲ್ಲ. ರಾಮೇಗೌಡ ಹಾಗೂ ನಾಗಶೆಟ್ಟಿ ಮತ್ತು ಮಾದೇಗೌಡ ರವರು ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ. ನಾಗಶೆಟ್ಟಿ ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ಬರೆದವರ ಹೆಸರು ಜಗದೀಶ. ಪತ್ರ ಬರಹಗಾರರು ಪತ್ರವನ್ನು ಬರೆಯಲು ಮಾಹಿತಿ ಕೊಟ್ಟಿರುತ್ತಾರೆ. ನಾನು ವಾದಿಗೆ 3 ಲಕ್ಷ ಹಣ ಕೊಡುತ್ತೇನೆ ರಾಜಿ ಮಾಡಿಕೊಳ್ಳುತ್ತೀರಾ ಎಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಸೋಮಶೆಟ್ಟಿರವರಿಗೆ ಜಮೀನನ್ನು ಮಾರಾಟ ಮಾಡುವ ಹಕ್ಕು ಇಲ್ಲ ಹಾಗಾಗಿ ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಕಾನೂನು ಬದ್ಧವಾಗಿ ಆಸ್ತಿಯನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ನಾನು ನಗದು ರೂಪದಲ್ಲಿ ಕ್ರಯದ ಹಣವನ್ನು ನೀಡಿರುತ್ತೇನೆ. ನಾನು ಸಾಲ ಮಾಡಿ ಕ್ರಯದ ಹಣವನ್ನು ಕೊಟ್ಟಿರುತ್ತೇನೆ. ವಾದಿಗೆ ಸೋಮಶೆಟ್ಟಿ ಜಮೀನು ಮಾರಾಟ ಮಾಡಿದ ಬಗ್ಗೆ ಯಾವುದೇ ತಿಳುವಳಿಕೆ ಇರಲಿಲ್ಲ ಕ್ರಯ ಪತ್ರದ ಬಗ್ಗೆ ವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸೋಮಶೆಟ್ಟಿ ಹಾಗೂ ಆತನ ಗಂಡು ಮಕ್ಕಳು ಕುಡಿತದ ದಾಸರಾಗಿದ್ದರು ಹಾಗೂ ಜುಜಾಟ ಆಡುತ್ತಿದ್ದರು ಸದರಿ ವಿಚಾರವನ್ನು ದುರಪಯೋಗ ಪಡಿಸಿಕೊಂಡು ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ನಾಗರಾಜು ರವರಿಗೆ ಸೇರಿದ ಆಸ್ತಿ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸೋಮಶೇಟ್ಟಿರವರ ಗಂಡು ಮಕ್ಕಳಿಗೆ ಯಾವ ರೀತಿ ಹಕ್ಕು ಇದೆಯೋ ಹೆಣ್ಣು ಮಕ್ಕಳಾದ ವಾದಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**